ಹಣ ಬಿಡುಗಡೆಯಾಗಿಲ್ಲ. ಅಲ್ಲಿ ರೈತರು ಆಕ್ರೋಶಗೊಂಡು ಸತ್ಯಾಗ್ರಹ, ಧರಣಿಯನ್ನು ಮಾಡುತ್ತಿದ್ದಾರೆ. ಆದರೂ ಸರ್ಕಾರ ಇದರ ಬಗ್ಗೆ ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ. ಅಲ್ಲಿ ಅಶಾಂತಿ ಉದ್ಭವವಾಗುವ ಸಂದರ್ಭ ಇದೆ. ನಾನು ತಾವು ಕೂಡಲೇ ಅಲ್ಲಿಗೆ ಹಣವನ್ನು ಬಿಡುಗಡೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಯೋಜನೆಯ ಕೆಲಸ ಪ್ರಾರಂಭವಾಗಲು ಆದೇಶ ಕೊಡಬೇಕು. ಬಜೆಟ್‌ನಲ್ಲಿ 50 ಲಕ್ಷ ರೂ. ಹಣವಿದ್ದರೂ ಕೂಡ ಇನ್ನೂ ಹಣವನ್ನು ಬಿಡುಗಡೆ ಮಾಡಿಲ್ಲ. ಕೆಲಸವನ್ನು ಪ್ರಾರಂಭಿಸಿಲ್ಲ. ಸರ್ಕಾರ ಇದನ್ನು ಗಂಭೀರವಾಗಿ ಯೋಚಿಸಿ ಕೆಲಸ ಪ್ರಾರಂಭಿಸಲು ಆದೇಶ ಕೊಡಬೇಕು. ತಾವು ನಿಧಾನ ಮಾಡಿದರೆ ಅಲ್ಲಿ ರೈತರ ಹೋರಾಟ ಪ್ರಾರಂಭವಾಗುತ್ತದೆ, ಆಗ ಅಶಾಂತಿಗೆ ಕಾರಣವಾಗುತ್ತದೆ. ಆದ್ದರಿಂದ ಸರ್ಕಾರ ಕೂಡಲೇ ಹಣವನ್ನು ಬಿಡುಗಡೆ ಮಾಡಿ ಕೆಲಸವನ್ನು ಕೈಗೆತ್ತಿಕೊಳ್ಳಲು ಆದೇಶ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇದರ ಬಗ್ಗೆ ನನಗೆ ಒಂದು ಪತ್ರವನ್ನು ಕೊಟ್ಟಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಈ ಯೋಜನೆ ಮಂಜೂರಾಗಿದೆ. ಇದು ಕೇಂದ್ರ ಸರ್ಕಾರದ ಯೋಜನೆ. ನೀವು ಇದಕ್ಕೆ ಹಣವನ್ನು ಖರ್ಚುಮಾಡಿದರೆ ಕೇವಲ 15 ದಿನಗೊಳಗೆ ಹಣ ವಾಪಸು ಬರುತ್ತದೆ. ಇದರಿಂದ ಸಾಕಷ್ಟು ನೀರಾವರಿಯಾಗುತ್ತದೆ. ಅದರಿಂದ ರೈತರಿಗೆ ಅನುಕೂಲವಾಗುತ್ತದೆ. ಆದ್ದರಿಂದ ತಕ್ಷಣ ಹಣವನ್ನು ಬಿಡುಗಡೆ ಮಾಡಿ, ಕೆಲಸವನ್ನು ಪ್ರಾರಂಭ ಮಾಡಿಸಿ, ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರಿ ಜೆ. ಸಿ. ಮಾಧುಸ್ವಾಮಿ : ಅಲ್ಲಿ ಕೆಲಸ ಮಾಡಿಸುತ್ತೇವೆಂದು ನೀರನ್ನು ಸಹ ಬಿಡಿಸಿಲ್ಲ. ನೀವು ನೀರನ್ನೂ ಬಿಡಿಸದೆ, ಕೆಲಸವನ್ನೂ ಮಾಡಿಸದಿದ್ದರೆ ಶಾಸಕರು ಅಲ್ಲಿ ಜನರಿಗೆ ಏನು ಉತ್ತರ ಹೇಳಬೇಕು? ಅಲ್ಲಿ ಈಗ 15 ಕಿ.ಮೀ. ಕಾಲುವೆ ಕೆಲಸ ಆಗಬೇಕು. ಈ ಕೆಲಸವನ್ನೂ ಮಾಡಿಸದೆ, ನೀರನ್ನೂ ಬಿಡದಿದ್ದರೆ ಹೇಗೆ? ಇದರ ಬಗ್ಗೆ ತಾವು ಕೂಡಲೇ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈಗ ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ನಾನು ಇದಕ್ಕೆ ಸಂಬಂಧಪಟ್ಟ ಕಡತವನ್ನು ನೋಡದೆ ನಾನು ಹೇಗೆ ಆಶ್ವಾಸನೆಯನ್ನು ಕೊಡಬೇಕು? ಮಾನ್ಯ ಸದಸ್ಯರು ನನ್ನ ಪರಿಸ್ಥಿತಿಯನ್ನೂ ಕೂಡ ಅರ್ಥಮಾಡಿಕೊಳ್ಳಬೇಕು.

ಶ್ರೀ ಬಿ. ಹೆಚ್. ಬನ್ನಿಕೋಡ್ : ಸಂಬಂಧಪಟ್ಟ ಮಂತ್ರಿಗಳು ಇಲ್ಲೇ ಇದ್ದಾರೆ, ಅವರ ಗಮನಕ್ಕೆ ತಂದಿದ್ದೇನೆ. ಅವರು ಪತ್ರವನ್ನು ಬರೆದಿದ್ದಾರೆ. ಇಲಾಖೆಯ ಕಾರ್ಯದರ್ಶಿಯವರಿಗೂ ಹೇಳಿದ್ದೇನೆ. ಅವರೂ ಹೇಳಿದ್ದಾರೆ. ಅವರಿಗೆ ಎಲ್ಲಾ ವಿವರಗಳೂ ಗೊತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಆದರೂ ನಾನು ಅದರ ವಿವರವನ್ನು ಸ್ವಲ್ಪಮಟ್ಟಿಗಾದರೂ ನೋಡಬೇಕಲ್ಲಾ?

ಡಾ: ಆರ್. ಬಿ. ಚೌದರಿ (ನೀರಾವರಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಕೆಲಸವನ್ನು ಕೈಗೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ನಾವು ಆದೇಶವನ್ನು ಕೊಟ್ಟಿದ್ದೇವೆ. ಕಮಿಟಿಯಲ್ಲಿ ಕ್ಲಿಯರ್ ಆಗದ ಹೊರತು ಇದನ್ನು ಮಾಡುವುದಕ್ಕಾಗುವುದಿಲ್ಲವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೂ ಕೂಡ ಶೀಘ್ರವಾಗಿ ಕೆಲಸವನ್ನು ತೆಗೆದುಕೊಳ್ಳುವಂತೆ ಹೇಳಿದ್ದೇವೆ.

ಶ್ರೀ ಎಂ. ಪಿ. ವೆಂಕಟೇಶ್ : ಮಾನ್ಯ ಅಧ್ಯಕ್ಷರೇ, ಮೈಸೂರು-ಬೆಂಗಳೂರು ರಸ್ತೆಯಲ್ಲಿ ಆಕ್ಸಿಡೆಂಟ್‌ನಿಂದ ವರ್ಷಕ್ಕೆ ಸಾವಿರಾರು ಜನರು ಸಾಯುತ್ತಿದ್ದಾರೆ. ಆದ್ದರಿಂದ ಮೈಸೂರು-ಬೆಂಗಳೂರು ರಸ್ತೆಯನ್ನು ಸಿಂಗಲ್‌ವೇ ರಸ್ತೆಯಾಗಿ ಮಾಡಬೇಕೆಂದು ಅನೇಕ ಸಾರಿ ಹೇಳಿದ್ದೇವೆ.

(ಗೊಂದಲ)

ಶ್ರೀ ಕೆ. ಹರ್ಷಕುಮಾರ್ ಗೌಡ : ಮಾನ್ಯ ಅಧ್ಯಕ್ಷರೇ, 1972ನೇ ಇಸವಿಯಿಂದ ಕೇಂದ್ರ ಸರ್ಕಾರದಿಂದ ನಮ್ಮ ಕರ್ನಾಟಕ ರಾಜ್ಯಕ್ಕೆ ಯಾವುದೇ ರಾಷ್ಟ್ರೀಯ ಹೆದ್ದಾರಿಯೂ ಮಂಜೂರಾಗಿಲ್ಲ. ಮೈಸೂರು - ಬೆಂಗಳೂರು ರಸ್ತೆ ಪ್ರಮುಖವಾದ ರಸ್ತೆಯಾಗಿದೆ. ಇದು ಕೊಡಗಿನವರೆಗೂ ಹೋಗುತ್ತದೆ. ಕೆ. ಎಸ್.ಆರ್. ಟಿ. ಸಿ. ಬಸ್ ಮನಾಪಲಿ ಆಗಿ ಕ್ಯಾಲಿಕಟವರೆಗೆ ಹೋಗುವವರೆಗೂ ಕಾರ್‌ನಲ್ಲೂ ಹೋಗುವುದಕ್ಕೆ ಸಾಧ್ಯವಿಲ್ಲವಾಗಿದೆ. ಪ್ರತಿದಿನ ಸುಮಾರು 5-10 ಅಪಘಾತಗಳಾಗುತ್ತಿರುತ್ತವೆ. ಕಳೆದ 10 ವರ್ಷಗಳಿಂದ ಸುಮಾರು ಒಂದು ಸಾವಿರಕ್ಕಿಂತ ಹೆಚ್ಚು ಜನರು ಅಪಘಾತದಲ್ಲಿ ಸತ್ತಿದ್ದಾರೆ. ಇದು ಸಾರ್ವಜನಿಕಹಿತಾಸಕ್ತಿಯ ಪ್ರಶ್ನೆ. ಪದೇ ಪದೇ ನಾವು ಈ ಬಗ್ಗೆ ಪ್ರಶ್ನೆಗಳನ್ನು ಕೇಳಿದಾಗಲೂ ಪರಿಶೀಲಿಸಲಾಗುತ್ತದೆ, ಕೇಂದ್ರಸರ್ಕಾರಕ್ಕೆ ನಾವು ಬರೆದಿದ್ದೇವೆ, ವಿಶ್ವ ಬ್ಯಾಂಕ್‌ನಿಂದ ನಮಗೆ ಹಣ ಬರುತ್ತದೆಂದು ಸರ್ಕಾರದಿಂದ ಉತ್ತರ ಬರುತ್ತಲೇ ಇದೆ. ನಮ್ಮ ಕರ್ನಾಟಕಕ್ಕೆ 1972ನೇ ಇಸವಿಯಿಂದ ಯಾವುದೇ ರಾಷ್ಟ್ರೀಯ ಹೆದ್ದಾರಿಯೂ ಮಂಜೂರಾಗಿಲ್ಲವೆಂದರೆ ಸಂಬಂಧಪಟ್ಟ ಅಧಿಕಾರಿಗಳು ಎಷ್ಟರ ಮಟ್ಟಿಗೆ ತಮ್ಮ ಕರ್ತವ್ಯವದಲ್ಲಿ ವಿಫಲರಾಗಿರಬಹುದೆಂದು ತಾವೇ ಯೋಚನೆ ಮಾಡಿ. ಸರ್ಕಾರಕ್ಕೂಕೂಡ ಮಾಹಿತಿ ಕೊಟ್ಟಿಲ್ಲ. ಮಾನ್ಯ ಸದಸ್ಯರು ಸದನದಲ್ಲಿ ಪ್ರಶ್ನೆಯನ್ನು ಕೇಳಿದರೂ ಅದಕ್ಕೆ ಸರಿಯಾದ ಉತ್ತರ ಸರ್ಕಾರದಿಂದ ದೊರಕುವುದಿಲ್ಲ. ಇವತ್ತೂ ಕೂಡ ಮೈಸೂರು-ಬೆಂಗಳೂರು ರಸ್ತೆಯಲ್ಲಿ ಕಾರ್‌ಗಳಲ್ಲೂ ಕೂಡ ಬರುವುದಕ್ಕಾಗುವುದಿಲ್ಲ. ಪ್ರತಿದಿನ ಬಸ್ಸಿನಲ್ಲೇ ನಾವು ಬರಬೇಕಾದ ಪರಿಸ್ಥಿತಿ ಇದೆ. ಈಗ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳೂ, ಸಂಬಂಧಪಟ್ಟ ಇಲಾಖೆಯ ಮಂತ್ರಿಗಳಾದ ಮಾನ್ಯ ರಂಗನಾಥ್‌ರವರೂ ಇದ್ದಾರೆ; ಮೈಸೂರು ಜಿಲ್ಲೆಯ ಶಾಸಕರೆಲ್ಲಾ ಸೇರಿ ಇವರನ್ನೂ ಒತ್ತಾಯ ಮಾಡಿ ಕೇಳಿದ್ದೇವೆ; ತುರ್ತಾಗಿ ಇದರ ಬಗ್ಗೆ ತಾವು ಕ್ರಮ ಕೈಗೊಳ್ಳಬೇಕು. ಕನಕಪುರರಸ್ತೆ 20 ಕಿ.ಮಿ. ರಸ್ತೆ ಏನಿದೆ; ಇದನ್ನು ಒನ್ ವೇ ಮಾಡಿ ರಿಪೇರಿ ಮಾಡಿಸಿದರೆ ಬಹಳ ಅನುಕೂಲವಾಗುತ್ತದೆ. ಮೈಸೂರು, ಮಂಡ್ಯ, ಕೊಡಗು,

ಕೇರಳಕ್ಕೆ ಹೋಗುವ ರಸ್ತೆಯನ್ನು ಕೂಡಲೇ ರಿಪೇರಿ ಮಾಡಿಸಿಕೊಡಬೇಕು. ತಕ್ಷಣವೇ ಇದರ ಬಗ್ಗೆ ಕಾರ್ಯೋನ್ಮುಕರಾಗಬೇಕೆಂದು ತಮ್ಮಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಸಂಬಂಧಪಟ್ಟ ಮಂತ್ರಿಗಳಲ್ಲಿ ಒತ್ತಾಯಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಯ ಹೆದ್ದಾರಿಯ ಬಗ್ಗೆ 1972ರಿಂದ ಇಲ್ಲಿಯವರೆಗೂ ಕೂಡ ರಾಜ್ಯಕ್ಕೆ ಒಂದು ಹೊಸ ರಸ್ತೆ ಕೂಡ ಮಂಜೂರಾಗಿಲ್ಲವೆಂದು ಈ ಸದನದಲ್ಲೂ ಮತ್ತು ಆ ಸದನದಲ್ಲೂ ಸಾಕಷ್ಟು ಬಾರಿ ಚರ್ಚೆಯಾಗಿದೆ. ಮಾನ್ಯ ಸದಸ್ಯರು ಈ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ, ಅದು ಸರ್ಕಾರದ ಗಮನಕ್ಕೂ ಕೂಡ ಬಂದಿದೆ. ಆದ್ದರಿಂದ ಕೇಂದ್ರಕ್ಕೆ ನಾವು ಮೊದಲು ಯಾವುದಾಗಬೇಕೆಂದು ಮನವಿಯನ್ನು ಕಳುಹಿಸಿಯೂ ಕೂಡ ಆಗಿದೆ. ಕಾರಣಾಂತರದಿಂದ ಕೇಂದ್ರವನ್ನು ಹಣಕಾಸಿನ ಅಡ್ಡಿಯನ್ನು ಮುಂದಿಟ್ಟು ಅದನ್ನು ಹಿಂದಕ್ಕೆ ಕಳುಹಿಸುತ್ತಿದ್ದಾರೆ. ಮಾನ್ಯ ಸದಸ್ಯರು ಈಗ ಏನು ಪ್ರಸ್ತಾಪ ಮಾಡುತ್ತಿದ್ದಾರೆ, ಮೈಸೂರು-ಬೆಂಗಳೂರಿಗೆ ಒಂದು ಎಕ್ಸ್‌ಪ್ರೆಸ್ ವೇ ಬೇಕು ಎಂದು, ಇದರ ಬಗ್ಗೆ ಸರ್ವೆಯೂ ಕೂಡ ಆಗಿದೆ, ಮತ್ತು ಟೆಂಡರ್ ಕೂಡ ಕರೆಯಲಾಗಿದೆ. ಅದರ ಬಗ್ಗೆ ಪರಿಶೀಲನೆ ಕೂಡ ಮಾಡುತ್ತಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರು ಕೊನೆಯ ದಿವಸ ಇಷ್ಟು ಜೋರಾಗಿ ಒತ್ತಾಯ ಮಾಡಿದರೆ ನಾಳೆಯೇ ರಸ್ತೆಯಾಗುತ್ತದೆಯೇ ಸ್ವಾಮಿ?

ಶ್ರೀ ಎಂ. ಪಿ. ವೆಂಕಟೇಶ್ : ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಮಾಡಿಸಿ ಎಂದು ನಾವು ಹೇಳುತ್ತೇವೆ.

ಶ್ರೀ ಕೆ. ಹೆಚ್. ರಂಗನಾಥ್ : ಮುಂದಿನ ಸಾರಿ ಅಲ್ಲಿಗೆ ನಮ್ಮ ವೆಂಕಟೇಶ್ವರವನ್ನೇ ಕಳುಹಿಸಿ ಬಿಡೋಣ. ಮಾನ್ಯ ಹರ್ಷಕುಮಾರ್‌ಗೌಡರ ಗಂಟಲು ದೊಡ್ಡದಾಗಿದೆ, ಈ ಧ್ವನಿಯನ್ನು ಅಲ್ಲೇ ಎತ್ತಿಬಿಡಲಿ. ನಮಗೆ ಇಲ್ಲಿ ಈ ಧ್ವನಿಯಕಾಟವೂ ಕಡಿಮೆಯಾಗುತ್ತದೆ. ಸರ್ಕಾರ ತೀವ್ರವಾಗಿ ಇದರ ಬಗ್ಗೆ ಗಮನಹರಿಸಿದೆ. 'ಎಕ್ಸ್‌ಪ್ರೆಸ್‌ವೇ' ಮಾಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಅದೂ ಕೂಡ ದೊಡ್ಡ ಒಂದು ಹಣಕಾಸಿನ ವಿಚಾರ ಇದರಲ್ಲಿದೆ.

ಡಾ॥ ವಿಜಯಕುಮಾರ್ ಖಂಪ್ರೆ : ಮಾನ್ಯ ಅಧ್ಯಕ್ಷರೇ, ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಕೆಲಸವನ್ನು ಎರಡು ಸಾವಿರದ ಇಸವಿಗೆ ಪೂರ್ತಿಗೊಳಿಸಬೇಕೆಂದು ಸರ್ಕಾರದ ಉದ್ದೇಶವಿದ್ದರೂ ಇದುವರೆಗೂ ಯಾವ ಹೊಸ ಕೆಲಸವನ್ನೂ ಶುರುಮಾಡಿಲ್ಲ, ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ತಮ್ಮ ಹೇಳಿಕೆಯನ್ನು ಕೂಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

*ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಸಭಾಪತಿಯವರೇ, ಈಗ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಅಲೋಕೇಟ್ ಮಾಡಿದಂಥ ನೀರು 173 ಟಿ.ಎಂ.ಸಿ. ಅಂದರೆ 119 ಟಿ.ಎಂ.ಸಿ. ಫಸ್ಟ್‌ಸ್ಟೇಜ್‌ನಲ್ಲಿ ಮತ್ತು 54 ಟಿಎಂಸಿ ಸೆಕೆಂಡ್ ಸ್ಟೇಜ್‌ನಲ್ಲಿ.